**O.S. 369-19 DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 11.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ S S S, ವಕೀಲರಿಂದಃ**

8. ನಮ್ಮ ಮಾವ ಸೋಮಪ್ಪ ರವರು ಎಸ್ ಬಿ ಐ, ನವನಗರ ಹಾಗೂ ಕೆ ವಿ ಜಿ ಬ್ಯಾಂಕಗಳಲ್ಲಿ ಖಾತೆಹೊಂದಿದ್ದರು ಅಂದರೆ ಸರಿ. ಅವು ಸದರಿ ಅಕೌಂಟಗಳು ಚಾಲ್ತಿಯಲ್ಲಿವೆ ಅಂದರೆ ಸರಿಯಲ್ಲ. 2019 ಸೋಮಪ್ಪ ಮರಣ ಹೊಂದಿದ ನಂತರ ಎ ಟಿ ಎಂ ಮೂಲಕ ಸೋಮಪ್ಪ ರವರ ಹೆಸರಿನಲ್ಲಿರುವ ಖಾತೆಗಳ ಹಣವನ್ನು ಬಳಕೆ ಮಾಡಿದ್ದೇವೆ ಅಂದರೆ ಗೊತ್ತಿಲ್ಲ.ಸೋಮಪ್ಪ ರವರು ಮರಣ ಹೊಂದಿದ ನಂತರ ಅವರ ಖಾತೆಯಿಂದ ಹಣ ಪಡೆದು ದುರ್ಲಾಭ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಮೇಲೆ ಹೇಳಿದ 2 ಖಾತೆಗಳ ಸ್ಟೇಟಮೆಂಟ ಆಫ್ ಅಕೌಂಟ ನ್ಯಾಯಾಲಯಕ್ಕೆ ಹಾಜರಪಡಿಸಲು ನಮ್ಮ ಅಭ್ಯಂತರವಿಲ್ಲ. ಸೋಮಪ್ಪ ರವರು ಮಾಡಿದ ವಿಲ್ ಹಾಗೂ ಬಕ್ಷಿಸ ಪತ್ರಗಳಲ್ಲಿ ಬ್ಯಾಂಕ ಖಾತೆಗಳ ನಮೂದು ಇಲ್ಲ ಅಂದರೆ ಸರಿ. ಅವರ ಹಣ ಮರಣ ಹೊಂದಿದ ನಂತರ ಇಂತಹವರಿಗೆ ಸೇರಬೇಕೆಂದು ಎಲ್ಲಿಯೂ ಉಲ್ಲೇಖವಿಲ್ಲ ಅಂದರೆ ಸರಿ. ವಾದಿ ಹಾಗೂ ಪ್ರತಿವಾದಿ ನಂಃ 1 ಹಾಗೂ 2 ರವರ ಮದುವೆ ಹಣ ಖರ್ಚು ಮಾಡಿದ ಬಗ್ಗೆ ದಾಖ್ಲೆಗಳಿಲ್ಲ. ಆಸ್ತಿಗಳು ಬೇರೆಯವರಿಗೆ ಹೋಗಬಾರದೆಂದು ಬಕ್ಷಿಸ ಪತ್ರ ಹಾಗೂ ವಿಲ್ ನ್ನು ನನ್ನ ಹೆಸರಿನಲ್ಲಿ ಸೃಷ್ಟಿಮಾಡಿ ವರ್ಗಾವಣೆ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.